विद्यार्थिनीनिलयः

एस्.एम्.एस्.पि.संस्कृतमहाविद्यालयः

उडुपी–५७६१०१

(एस्.एम्.एस्.पि.सभायामधीनः)



आवेदनापत्रम्

. . . . . .

१. विद्यार्थिन्या नाम ವಿದ್ಯಾರ್ಥಿನಿಯ ಹೆಸರು : . . . . . .

२. तस्या दूरवाणीसंख्या ದೂರವಾಣೀ ಸಂಖ್ಯೆ : . . . . . .

३. पितुः/मातुः/पोषकस्य नाम : . . . . . .

ತಂದೆ/ತಾಯಿ/ಪೋಷಕರ ಹೆಸರು

४. दूरवाणीसंख्या ದೂರವಾಣೀ ಸಂಖ್ಯೆ : . . . . . .

सङ्केतः ವಿಳಾಸ : . . . . . .

. . . . . .

. . . . . .

५. महाविद्यालये कक्ष्याया नाम ಕಾಲೇಜಿನಲ್ಲಿ ತರಗತಿ : . . . . . .

६. गतवर्षीयकक्ष्या, अङ्काः, प्रतिशताङ्कश्च : . . . . . .

ಹಿಂದಿನ ವರ್ಷದ ತರಗತಿ/ಅಂಕಗಳು/ಶೇಕಡಾ : . . . . . , ... , ...

अत्र आवेदनापत्रे ये विषया मया निर्दिष्टाः ते सर्वेऽपि सत्या इति प्रतिजाने । पुनश्च अत्र विद्यार्थिनीनिलये ये नियमाः सन्ति तानहं सर्वथा पालयामि । यदि न पालयामि, यदि च विद्यार्थिनीनिलये मम चरितम् अनुचितं भाति तर्हि विद्यार्थिनीनिलयाधिकृता मयि समुचितं निर्णयं कर्तुं प्रभवन्ति ।

ಈ ಆವೇದನಾಪತ್ರದಲ್ಲಿ ಯಾವ ವಿಷಯಗಳು ನಮೂದಿಸಲ್ಪಟ್ಟಿವೆಯೋ ಅವುಗಳೆಲ್ಲವೂ ಸತ್ಯ. ಈ ವಿದ್ಯಾರ್ಥಿನೀನಿಲಯದ ಯಾವ ಶಿಸ್ತು–ನಿಯಮಗಳಿವೆಯೋ ಅವುಗಳೆಲ್ಲವನ್ನೂ ನಾನು ಪಾಲಿಸುತ್ತೇನೆ ಎಂದು ದೃಢವಾಗಿ ಹೇಳುತ್ತೇನೆ. ಒಂದು ವೇಳೆ ನಾನು ನಿಯಮಗಳನ್ನು ಪಾಲಿಸದಿದ್ದಲ್ಲಿ ಅಥವಾ ನನ್ನ ವರ್ತನೆ ಸರಿಯಾಗಿಲ್ಲದಿದ್ದಲ್ಲಿ ವಿದ್ಯಾರ್ಥಿನೀನಿಲಯದ ಅಧಿಕಾರಿಗಳು ನನ್ನ ವಿಷಯದಲ್ಲಿ ಯೋಗ್ಯವಾದ ನಿರ್ಣಯವನ್ನು ಕೈಗೊಳ್ಳಬಹುದಾಗಿದೆ.

स्थलम् ಸ್ಥಳ :

दिनाङ्कः ದಿನಾಂಕ :

पितुः/मातुः/पोषकस्य हस्ताङ्कनम् ಪೆತ್ತವರ/ಪಾಲಕರ ಸಹಿ

विद्यार्थिन्या हस्ताङ्कनम् ವಿದ್ಯಾರ್ಥಿನಿಯ ಸಹಿ

कार्यालयस्य उपयोगार्थम् ಕಾರ್ಯಾಲಯದ ಉಪಯೋಗಕ್ಕಾಗಿ

विद्यार्थिनीनिलयस्य भद्रताशुल्कम् –

प्रकोष्ठस्य संख्या –

दिनाङ्कः : अधिकृतस्य हस्ताङ्कनम्

>>>

ಎಸ್.ಎಮ್.ಎಸ್.ಪಿ ಸಂಸ್ಕೃತಮಹಾವಿದ್ಯಾಲಯದ

'ವಿದ್ಯಾರ್ಥಿನೀನಿಲಯ'ದ ನಿಯಮ ನಿಬಂಧನೆಗಳು

ಎಸ್.ಎಮ್.ಎಸ್.ಪಿ ಸಭಾ, ಉಡುಪಿ ಈ ಸಂಸ್ಥೆಯು ಸಂಸ್ಕೃತಕಾಲೇಜಿನಲ್ಲಿ ಅಧ್ಯಯನ ಮಾಡುವ ವಿದ್ಯಾರ್ಥಿನಿಯರಿಗೆ ದೊಡ್ಡಣಗುಡ್ಡೆಯ ಧೂಮಾವತಿ ಕಟ್ಟೆಯ ಸಮೀಪದಲ್ಲಿರುವ ಫ್ಲಾಟ್‌ನ ಮೂರನೆಯ ಅಂತಸ್ತಿನಲ್ಲಿ ಉಚಿತವಾದ ವಿದ್ಯಾರ್ಥಿನೀನಿಲಯದಲ್ಲಿ ವಾಸವನ್ನು ವ್ಯವಸ್ಥೆಗೊಳಿಸಿರುತ್ತದೆ. ಅದಕ್ಕೆ ಸಂಬಂಧಿಸಿದ ನಿಯಮಗಳು –

೧. ವಿದ್ಯಾರ್ಥಿನೀನಿಲಯದಲ್ಲಿ ವಾರ್ಡನ್ ತಿಳಿಸಿರುವ ನಿಯಮ ನಿಬಂಧನೆಗಳನ್ನು ಅನುಸರಿಸುವುದು.

೨. ವಿದ್ಯುತ್ ಬಿಲ್ಲು ಇತ್ಯಾದಿ ಖರ್ಚುಗಳನ್ನು ವಿದ್ಯಾರ್ಥಿನಿಯರು ತಾವೇ ಭರಿಸುವುದು. ಸದ್ಯಕ್ಕೆ ಆ ಫ್ಲಾಟ್‌ನಲ್ಲಿ ನಿರ್ವಹಣ ವೆಚ್ಚ (Maintanance Expenses) ಇರುವುದಿಲ್ಲ. ಮುಂದೆ ಎಂದಾದರೂ ಇರುವುದಾದಲ್ಲಿ ಅದನ್ನೂ ಅವರೇ ಭರಿಸಿಕೊಳ್ಳುವುದು.

೩. ಉಡುಪಿಯಲ್ಲಿ ನೀರಿನ ಸಮಸ್ಯೆ ಇರುವುದರಿಂದ ಮಿತವಾಗಿ ಅಗತ್ಯಕ್ಕೆ ತಕ್ಕಂತೆ ಬಳಸುವುದು. ಇದನ್ನು ಯಾವಾಗಲೂ ನೆನಪಿನಲ್ಲಿ ಇಟ್ಟುಕೊಳ್ಳುವುದು.

೪. ವಿದ್ಯಾರ್ಥಿನೀನಿಲಯವನ್ನು ಸ್ವಚ್ಛವಾಗಿ ಇಟ್ಟುಕೊಳ್ಳುವುದು. ಅಲ್ಲಿನ ಸೌಂದರ್ಯವನ್ನು ಹಾನಿಗೊಳಿಸಬಾರದು.

೫. ಕಾಲೇಜಿನಲ್ಲಿ ನಿರ್ದಿಷ್ಟಪಡಿಸಿದ ಹಾಜರಿ ಮತ್ತು ತೃಪ್ತಿಕರ ಫಲಿತಾಂಶ ಇದ್ದರೆ ಮಾತ್ರ ವಿದ್ಯಾರ್ಥಿನೀನಿಲಯದಲ್ಲಿ ಅವಕಾಶ ಇರುತ್ತದೆ.

೬. ಪ್ರವೇಶ ಸಂದರ್ಭದಲ್ಲಿಯೇ ಭದ್ರತಾಠೇವಣಿರೂಪದಲ್ಲಿ ರೂ. ೧೦೦೦/– ಗಳನ್ನು ವಿದ್ಯಾರ್ಥಿನೀನಿಲಯದ ಅಧಿಕಾರಿಗಳಿಗೆ ಒಪ್ಪಿಸುವುದು.

೭. ಹೆತ್ತವರು/ಪೋಷಕರು ಬಂದಲ್ಲಿ ಅವರನ್ನು ವಾರ್ಡನ್ ಅನುಮತಿ ಮೇರೆಗೆ ಒಂದೆರಡು ದಿನಗಳ ಕಾಲ ಉಳಿಸಿಕೊಳ್ಳಬಹುದು. ಉಳಿದವರಿಗೆ ತೊಂದರೆಯಾಗುವ ಕಾರಣ ಹೊರಗಿನ ಸಂಬಂಧಿಗಳನ್ನು ವಾಸಸ್ಥಾನಕ್ಕೆ ಪದೇ ಪದೇ ಆಹ್ವಾನಿಸುವುದು ಸರಿಯಲ್ಲ. ವಾರ್ಡನ್ ಅನುಮತಿಯಿದ್ದರೆ ಮಾತ್ರ ಪುರುಷರಿಗೆ ಪ್ರವೇಶ.

೮. ಪ್ರತಿ ಶೈಕ್ಷಣಿಕ ವರ್ಷದ ಕೊನೆಯಲ್ಲಿ ಕೊಠಡಿಯನ್ನು ತೆರವುಗೊಳಿಸಬೇಕು.

೯. ರಾತ್ರಿ ವಾರ್ಡನ್ ನಿರ್ದಿಷ್ಟಪಡಿಸಿದ ಸಮಯದೊಳಗಾಗಿ ವಿದ್ಯಾರ್ಥಿನೀನಿಲಯವನ್ನು ಸೇರಿಕೊಳ್ಳಬೇಕು.

೧೦. ದುರ್ವ್ಯಸನ, ದುರಾಚಾರ ಮತ್ತು ಅನ್ಯರಿಗೆ ಉಪದ್ರವವಾಗುವ ಯಾವುದೇ ಕಾರ್ಯಗಳನ್ನು ಮಾಡಿದಲ್ಲಿ ಆ ವಿದ್ಯಾರ್ಥಿನಿಯನ್ನು ತಕ್ಷಣವೇ ನಿಲಯದಿಂದ ಹೊರಗೆ ಕಳುಹಿಸಲಾಗುವುದು.

ಸೂಕ್ತ ನಿಯಮವನ್ನು ಕಾಲ ಕಾಲಕ್ಕೆ ಬದಲಾಯಿಸುವ ಅಧಿಕಾರ ವಿದ್ಯಾರ್ಥಿನೀನಿಲಯಕ್ಕಿದೆ. ಅಲ್ಲದೇ ಯಾವುದೇ ನಿಯಮಗಳನ್ನು ಉಲ್ಲಂಘಿಸಿದ್ದು ಕಂಡು ಬಂದಲ್ಲಿ ಆ ವಿದ್ಯಾರ್ಥಿನಿಯನ್ನು ಯಾವ ಕಾರಣವನ್ನೂ ನೀಡದೆ ತಕ್ಷಣವೇ ನಿಲಯದಿಂದ ಹೊರಗೆ ಕಳುಹಿಸಲಾಗುವುದು.

ಸ್ಥಳ : ಉಡುಪಿ

ದಿನಾಂಕ : 1.11.2017

–+*0*+–